O.S. NO.243/2022
PW - 1.
Dated: 18-07-2024.

<u>ಸಾಕ್ಷಿಯನ್ನು ಕರೆಯಿಸಿ ಶಪತವನ್ನು ಬೋಧಿಸಿದೆ.</u>

<u>ಪಾಟೀ ಸವಾಲುಃ ಪ್ರತಿವಾದಿಗಳ ಪರವಾಗಿ ಶ್ರೀ ಎ ಎಪ್ ಪಿ ವಕೀಲರಿಂದ</u>

ನಾನು ಎಲ್ ಎಲ್ ಬಿ ಓದಿರುತ್ತೇನೆ. ನಾನು ವಕೀಲೆ ಆಗಿ ಕಳೆದ ಒಂದು ವರ್ಷದಿಂದ ಪ್ರ್ಯಾಕ್ಟೀಸ ಮಾಡುತ್ತಿದ್ದೇನೆ. ನನ್ನ ತಾಯಿಗೆ ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿಯಲು ಯಾವುದೇ ತೊಂದರೆ ಇರುವುದಿಲ್ಲ ಎಂದರೆ ನಿಜ. ಸಾಕ್ಷಿ ಮುಂದುವರೆದು ಅವರಿಗೆ ವಯಸ್ಸು ಆಗಿದೆ ಎಂದು ಪುನಃ ನುಡಿದಿರುತ್ತಾರೆ. ಬೈಲಹೊಂಗಲ ನ್ಯಾಯಾಲಯಕ್ಕೆ ನನ್ನ ತಾಯಿ ಎಷ್ಟು ಸಲ ಬಂದಿರುತ್ತಾರೆ ಎಂದರೆ ಸಾಕ್ಷಿ ನಾನು ಒಬ್ಬಳೇ ಬಂದಿರುತ್ತೇನೆ ಎಂದು ನುಡಿದಿರುತ್ತಾರೆ. ನನ್ನ ತಾಯಿ ಬೈಲಹೊಂಗಲ ನ್ಯಾಯಾಲಯಕ್ಕೆ ಯಾವತ್ತೂ ಬಂದಿರುವುದಿಲ್ಲ ಕಾರಣ ಅವರಿಗೆ ಕಾಲು ನೋವು ಇರುತ್ತದೆ. ನಮ್ಮ ಮತ್ತು ಪ್ರತಿವಾದಿರವರ ಕುಟುಂಬದ ಬಗ್ಗೆ ನನಗಿಂತ ನನ್ನ ತಾಯಿ ಹೆಚ್ಚು ಗೊತ್ತಿರುತ್ತದೆ ಎಂದರೆ ನಮ್ಮಿಬ್ಬರಿಗೂ ಗೊತ್ತಿರುತ್ತದೆ.

ನನ್ನ ತಂದೆ 1987 ರಲ್ಲಿ ಮೃತಪಟ್ಟಿರುತ್ತಾರೆ. ನನ್ನ ತಂದೆ ಮೃತಪಟ್ಟಾಗ ನಾನು 17 ದಿನದ ಮಗು ಇದ್ದೇನು. ನನ್ನ ತಾಯಿ ಮತ್ತು ಪ್ರತಿವಾದಿಯ ನಡುವೆ ಏನು ಏನು ವ್ಯವಹಾರ ಆಗಿರುತ್ತದೆ ಎಂದು ನನಗೆ ಹೇಳಲು ಬರುವುದಿಲ್ಲ ಎಂದರೆ

ಸರಿಯಲ್ಲ. ನನ್ನ ತಂದೆ ಮೃತಪಟ್ಟ ನಂತರ ನನ್ನ ತಾಯಿ ಪ್ರತಿವಾದಿಯರಿಗೆ ಆಸ್ತಿಗಳಲ್ಲಿ ಪಾಲು ಕೊಡಲು ಕೇಳಿದ್ದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ನನ್ನ ತಾಯಿ ದಾವಾ ಆಸ್ತಿಗಳಲ್ಲಿನ ತನ್ನ ಹಿಸ್ಸೆ ಬದಲಾಗಿ ರೂ. 30 ಸಾವಿರ ನಗದು ಹಣ ಪಡೆದು ತನ್ನ ಹಿಸ್ಸಾ ಹಕ್ಕನ್ನು ಬಿಟ್ಟು ಕೊಟ್ಟಿರುತ್ತಾಳೆ ಎಂದರೆ ಸರಿಯಲ್ಲ. ಈ ಕುರಿತು ದಿನಾಂಕ 20-09-1988 ರಂದು ನನ್ನ ತಾಯಿ ರೂ. 30 ರೂಪಾಯಿ ಸ್ಟಾಂಪ ಮೇಲೆ ಹಕ್ಕುಬಿಟ್ಟ ಪತ್ರ ಬರೆದು ಕೊಟ್ಟಿರುತ್ತಾಳೆ ಎಂದರೆ ಸರಿಯಲ್ಲ. ಸದರಿ ಹಕ್ಕು ಬಿಟ್ಟ ಪತ್ರದಲ್ಲಿ ನನ್ನ ತಾಯಿ ಮತ್ತು ಹಿರಿಯರು ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಈಗ ತೋರಿಸಿದ ದಾಖಲೆ ನನ್ನ ತಾಯಿ ಬರೆದು ಕೊಟ್ಟ ಹಕ್ಕು ಬಿಟ್ಟು ಪತ್ರ ಎಂದರೆ ಸರಿಯಲ್ಲ. ಸದರಿ ಪತ್ರ ನನ್ನ ತಾಯಿ ಹಕ್ಕು ಬಿಟ್ಟು ಕೊಟ್ಟ ಪತ್ರ ಇದ್ದ ವಿಷಯ ನನಗೆ ಗೊತ್ತಿದ್ದರೂ ಸಹ ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಾಯಿ ದಿನಾಂಕ 20-09-1988 ರಂದು ಹಕ್ಕು ಬಿಟ್ಟು ಕೊಟ್ಟಿದ್ದರೂ ಸಹ ತನ್ನ ಮತ್ತು ನನ್ನ ಪರವಾಗಿ ಅವಳು ಎಸಿ ನ್ಯಾಯಾಲಯದಲ್ಲಿ ಆರ್ ಎ ಸಿ ನಂ. 79/2022/03 ರಂತೆ ಮೇಲ್ಮನವಿ ಸಲ್ಲಿಸಿದಳು ಎಂದರೆ ಸರಿಯಲ್ಲ. ಈಗ ತೋರಿಸಿದ ದಾಖಲೆ ಎಸಿ ನ್ಯಾಯಾಲಯದ ಆದೇಶದ ಧೃಡೀಕೃತ  ನಕಲುಗಳು ಎಂದರೆ ನನ್ನ ತಾಯಿ ಯಾವುದೇ ಮೇಲ್ಮನವಿ ಸಲ್ಲಿಸಿರುವುದಿಲ್ಲ ಎಂದು ನುಡಿದಿರುತ್ತಾರೆ. ಈಗ ತೋರಿಸಿದ ಧೃಡೀಕೃತ ದಾಖಲೆಯಲ್ಲಿ ನರ್ಸುಬಾಯಿ ಮತ್ತು ಅರ್ಚನಾ ಅಂತಾ

ಬರೆದಿರುತ್ತಾರೆ. ನನ್ನ ತಾಯಿ ಸಲ್ಲಿಸಿದ ಮೇಲ್ಮನವಿಯನ್ನು ಎಸಿ ನ್ಯಾಯಾಲಯ ವಜಾ ಮಾಡಿತು ಎಂದರೆ ನಾವು ಯಾವುದೇ ಮೇಲ್ಮನವಿ ಸಲ್ಲಿಸಿರಲಿಲ್ಲ ಎಂದು ನುಡಿದಿರುತ್ತಾರೆ.

ಪ್ರಸ್ತುತ ದಾವೆ ನಾನು ಮತ್ತು ನನ್ನ ತಾಯಿ ಸಲ್ಲಿಸಿರುತ್ತೇವೆ. ಪ್ರತಿವಾದಿಗಳು ತಮ್ಮ ಲಿಖಿತ ಹೇಳಿಕೆಯಲ್ಲಿ ಏನು ಬರೆದಿತ್ತಾರೆ ಎನ್ನುವುದು ನನಗೆ ಗೊತ್ತಿರುತ್ತದೆ ಎಂದರೆ ನಿಜ. ನನ್ನ ಮನೆತನದ ವಂಶಾವಳಿ ಬಗ್ಗೆ ನನಗೆ ಗೊತ್ತಿರುತ್ತದೆ. ಕೇಸರಸಿಂಗ ರವರ ತಂದೆ ಹೆಸರು ಪ್ರತಾಪಸಿಂಗ ಇರುತ್ತದೆ. ಪ್ರತಾಪಸಿಂಗ ರವರ ತಂದೆ ಹೆಸರು ರಾಜಾರಾಮ ಇರುತ್ತದೆ. ಕೇಸರ ಸಿಂಗ ಇವರು ಭವಾನಿ ಸಿಂಗ ರವರ ಕುಟುಂಬಕ್ಕೆ ದತ್ತಕ್ಕಕ್ಕೆ ಹೊಗಿರುತ್ತಾರೆ. ಈ ಎಲ್ಲ ಸಂಗತಿಗಳ ಬಗ್ಗೆ ನಮ್ಮ ವಾದ ಪತ್ರದಲ್ಲಿ ಹೇಳಿ ಬರೆಸಿರುತ್ತೇವೆ.

ಪ್ರತಾಪ ಸಿಂಗ ರವರ ಹೆಸರಿನಲ್ಲಿ 4 ಆಸ್ತಿಗಳು ಇದ್ದವು. ಭವಾನಿ ಸಿಂಗ ರವರ ಹೆಸರಿನಲ್ಲಿ ಇದ್ದ ಆಸ್ತಿ ಗಳು ಇದ್ದವು ಎಂದು ಗೊತ್ತಿಲ್ಲ . ಪ್ರತಾಪ ಸಿಂಗ ರವರ ಹೆಸರಿನಲ್ಲಿ ಇದ್ದ ಸರ್ವೆ ನಂ. 40/1, 41, 5 ಮತ್ತು ಮನೆ ಆಸ್ತಿ 942, 943 ಇರುತ್ತವೆ. ಕೇಸರ ಸಿಂಗ ರವರ ಹೆಸರಿನಲ್ಲಿ ಸರ್ವೆ ನಂ. 40/1, 41 ಮತ್ತು 5 ಹಾಗೂ ಮನೆ ಆಸ್ತಿ 942, 943 ಇದ್ದವು. ಸದರಿ ಆಸ್ತಿಗಳು ಮೂಲತಃ ಕೇಸರ ಸಿಂಗ ರವರ ಆಸ್ತಿಗಳು ಇದ್ದವು ಎಂದರೆ ಸರಿ.

O.S. NO.243/2022
PW - 1.
Dated: 18-07-2024.

ಸರ್ವೆ ನಂ. 57, 55/9ಬ, 55/9ಅ, 55/3ಬ , 59/ಅ/2ಅ, 58/1+2ಅ, 59/ಎ1, 58/1+2ಅ, 57, 58/1, 59/ಅ, 137/1 ಮತ್ತು 105/1 ಗಳು ಮೂಲತಃ ಕೇಸರ ಸಿಂಗರವರಿಗೆ ಸೇರಿದ ಆಸ್ತಿಗಳು ಎಂದರೆ ಸಾಕ್ಷಿ ಅವರು ಜೀವಂತ ಇದ್ದಾಗ ಅವರು ಮಾರಾಟ ಮಾಡಿಕೊಂಡಿರುತ್ತಾರೆ ಅಂತಾ ನುಡಿದಿರುತ್ತಾರೆ. ಕೇಸರ ಸಿಂಗ 2001 ರಲ್ಲಿ ಮೃತಪಟ್ಟಿರುತ್ತಾರೆ. ಕೇಸರ ಸಿಂಗರವರು ತನ್ನ ಜೀವಿತ ಅವದಿಯಲ್ಲಿ ಈ ಮೇಲಿನ ಆಸ್ತಿಗಳನ್ನು ಮಾರಾಟ ಮಾಡಿ ಮಾರಾಟದಿಂದ ಬಂದ ಹಣವನ್ನು ನನ್ನ ತಾಯಿಗೆ ಕೊಟ್ಟಿರುತ್ತಾನೆ ಎಂದರೆ ಸರಿಯಲ್ಲ. ಕೇಸರ ಸಿಂಗ ರವರು ಮಾರಾಟ ಮಾಡಿದ ಆಸ್ತಿಗಳ ಖರೀದಿ ಪತ್ರಗಳ ದಿನಾಂಕ ಮತ್ತು ಇಸ್ವಿಗಳನ್ನು ಹೇಳಲು ಬರುವುದಿಲ್ಲ. ನನ್ನ ತಾಯಿಗೆ ಸದರಿ ಮಾರಾಟದ ದಿನಾಂಕ ಮತ್ತು ಇಸ್ವಿ ಗಳ ಬಗ್ಗೆ ಗೊತ್ತಿರುತ್ತದೆ ಎಂದರೆ ಸರಿಯಲ್ಲ. ನನ್ನ ತಾಯಿ ದಿನಾಂಕ 20-09-1988 ರಂದು ದಾವಾ ಆಸ್ತಿಗಳಲ್ಲಿ ಹಕ್ಕು ಬಿಟ್ಟು ಕೊಟ್ಟ ನಂತರ ಅಂದಿನಿಂದ ಇಲ್ಲಿಯವರೆಗೆ ದಾವಾ ಆಸ್ತಿಗಳಿಗೆ ಭೇಟಿ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿ ತನ್ನ ದಾವಾ ಆಸ್ತಿಗಳಲ್ಲಿ ಇರುವ ಹಕ್ಕನ್ನು ಬಿಟ್ಟು ಕೊಟ್ಟ ನಂತರ ತಾನು ಆಸ್ತಿ ಪುನಃ ಬರುವುದಿಲ್ಲ ಅಂತಾ ಹೇಳಿ ಹೊಗಿರುತ್ತಾಳೆ ಎಂದರೆ ಸರಿಯಲ್ಲ. ದಿನಾಂಕ 20-09-1988 ರಿಂದ ಇಲ್ಲಿಯವರೆಗೆ ದಾವಾ

ಆಸ್ತಿಗಳ ಕಬ್ಜಾ ವಹಿವಾಟನ್ನು ಪ್ರತಿವಾದಿಗಳು ಮಾತ್ರ ಮಾಡುತ್ತಾ ಬರುತ್ತಿದ್ದಾರೆ ಎಂದರೆ ಸರಿಯಲ್ಲ. ನನ್ನ ಮತ್ತು ನನ್ನ ತಾಯಿ 1988 ರಿಂದ ದಾವಾ ಆಸ್ತಿಗಳಲ್ಲಿ ಯಾವುದೇ ಸಾಮೂಹಿಕ ಕಬ್ಜಾ ವಹಿವಾಟು ಮಾಡುತ್ತಿಲ್ಲ ಎಂದರೆ ಸರಿಯಲ್ಲ. 1988 ರಿಂದ ಇಲ್ಲಿಯವರೆಗೆ ನಾನು ಮತ್ತು ನನ್ನ ತಾಯಿ ಸಂಪಗಾಂವ ಗ್ರಾಮದಲ್ಲಿ ವಾಸವಿದ್ದ ಬಗ್ಗೆ ದಾಖಲೆಗಳನ್ನು ಹಾಜರು ಮಾಡಿದ್ದೀರಾ ಎಂದರೆ ಹಾಜರು ಮಾಡಿಲ್ಲ. ನಾನು ಮತ್ತು ನನ್ನ ತಾಯಿ ಪ್ರತಿವಾದಿಗಳ ಜೊತೆ ದಾವಾ ಆಸ್ತಿಗಳ ಸಾಮೂಹಿಕ ಕಬ್ಜಾ ವಹಿವಾಟು ಮಾಡುವ ಬಗ್ಗೆ ದಾಖಲೆಗಳು ಹಾಜರು ಮಾಡಿದ್ದೀರಾ ಎಂದರೆ ಸಾಕ್ಷಿ ನ್ಯಾಯಾಲಯಕ್ಕೆ ಹಾಜರು ಮಾಡಿರುವುದಿಲ್ಲ ಎಂದು ನುಡಿದಿರುತ್ತಾರೆ .

ನಾನು ಮತ್ತು ನನ್ನ ತಾಯಿ ಹಾವೇರಿ ಜಿಲ್ಲೆಯ ಶಿಗ್ಗಾಂವ ತಾಲೂಕಿನ ಬಂಕಾಪೂರ ಗ್ರಾಮದಲ್ಲಿ ವಾಸವಿರುತ್ತೇವೆ. ಸದರಿ ಬಂಕಾಪೂರ ಗ್ರಾಮದಿಂದ ಸಂಪಂಗಾಂವ ಗ್ರಾಮ 120 ಕಿ.ಮಿ. ಅಂತರದಲ್ಲಿ ಇರುತ್ತದೆ. ಪ್ರತಿವಾದಿಯರ ಪರಿಚಯ ನನಗೆ ಇರುತ್ತದೆ. ಪ್ರತಿವಾದಿಯರಲ್ಲಿ ಯಾರ ಯಾರ ಮದುವೆ ಯಾವ ಯಾವಾಗ ಆಗಿರುತ್ತದೆ ಎಂದು ಹೇಳಬಲ್ಲೆ. 1 ನೇ ಪ್ರತಿವಾದಿ ಮದುವೆ ಯಾವಾಗ ಆಯಿತು ಎಂದರೆ ಸಾಕ್ಷಿ ಇಸ್ವಿ ನೆನಪಿಲ್ಲ ಆದರೆ ನನ್ನ ಕಾಕಿ ಕಂಬಾರ ಗಲ್ಲಿಯವರಿರುತ್ತಾರೆ ಎಂದು ನುಡಿದಿರುತ್ತಾರೆ. 2 ನೇ ಪ್ರತಿವಾದಿ ಮದುವೆ ಯಾವಾಗ ಆಯಿತು ಎಂದರೆ ಸಾಕ್ಷಿ 1 ನೇ ಪ್ರತಿವಾದಿಯ ಮದುವೆ ಆದ ನಂತರ

ಆಗಿದೆ. ಇಸ್ವಿ ನೆನಪಿಲ್ಲ. 2 ನೇ ಪ್ರತಿವಾದಿ ಮದುವೆ ಮತ್ತು ನನ್ನ ಸೋದರ ಅತ್ತೆ ಪ್ರೇಮಕ್ಕ ರವರ ಮದುವೆ ಒಂದೇ ಹಂದರದಲ್ಲಿ ಆಗಿರುತ್ತದೆ ಎಂದು ನುಡಿದಿರುತ್ತಾರೆ. 3 ನೇ ಪ್ರತಿವಾದಿ ಮದುವೆ ಯಾವಾಗ ಆಯಿತು ಎಂದರೆ ಸಾಕ್ಷಿ ನನಗೆ ಇಸ್ವಿ ನೆನಪಿಲ್ಲ ಎಂದು ನುಡಿದಿರುತ್ತಾರೆ. 4 ನೇ ಪ್ರತಿವಾದಿ ಮದುವೆ ಯಾವಾಗ ಆಯಿತು ಎಂದರೆ ಸಾಕ್ಷಿ 1 ರಿಂದ 3 ನೇ ಪ್ರತಿವಾದಿಗಳ ಮದುವೆ ಪೂರ್ವದಲ್ಲಿ ನನ್ನ ತಂದೆ ಮತ್ತು ಆಕೆಯ ಮದುವೆ ಒಂದೇ ಚಪ್ಪರದಲ್ಲಿ ಆಗಿರುತ್ತದೆ. 6 ನೇ ಪ್ರತಿವಾದಿ ಮದುವೆ ಯಾವಾಗ ಆಯಿತು ಎಂದರೆ ಸಾಕ್ಷಿ 2016 ರಲ್ಲಿ ಆಗಿರುತ್ತದೆ ಎಂದು ನುಡಿದಿರುತ್ತಾರೆ. ಅವಳ ಮದುವೆಯ ಪೊಟೊಗಳು ಮಾಡಿಸಿರುತ್ತಾರೆ. ಸದರಿ ಪೊಟೊಗಳು ನನ್ನ ಹತ್ತಿರ ಇರುವುದಿಲ್ಲ. ನಾನು ಮತ್ತು ನನ್ನ ತಾಯಿ 1988 ರಿಂದ ಯಾವುದೇ ಕಾರ್ಯಕ್ರಮ ಹೊಗಿರುವುದಿಲ್ಲ ಹೊಗದೇ ಇದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಸಂಪಗಾಂವ ಗ್ರಾಮಕ್ಕೆ ಹಹೊಗಿದ್ದೇವು ಎನ್ನುವುದು ಸುಳ್ಳ ಎಂದರೆ ಸರಿಯಲ್ಲ. 1988 ರಿಂದ ಇಲ್ಲಿಯವರೆಗ ನಾವು ಸಂಪಗಾಂವ ಗ್ರಾಮಕ್ಕೆ ಯಾವತ್ತೂ ಹೊಗಿರುವುದಿಲ್ಲ ಎಂದರೆ ಸರಿಯಲ್ಲ.

ನನ್ನ ತಂದೆ ಮೃತ ಪಟ್ಟ ತಕ್ಷಣ ದಾವಾ ಆಸ್ತಿಗಳಲ್ಲಿ ಪಾಲು ಕೊರಿ ದಾವಾ ಿ ಸಲ್ಲಿಸಲು ಯಾವುದೇ ತೊಂದರೆ ಇರಲಿಲ್ಲ ಎಂದು ಸಾಕ್ಷಿ ಆಗ ನಾವು ಎಲ್ಲರೂ ಕೂಡಿ

ಚೆನ್ನಾಗಿ ಇದ್ದೇವು ಎಂದು ನಡಿದಿರುತ್ತಾರೆ . ಈ ಮಾತು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳನ್ನು ನಾನು ನೋಡಿರುತ್ತೇನೆ.

ಸರ್ವೆ ನಂ. 40/1 ರ ಚಕ್ಕ ಬಂದಿ ಹೇಳಬಲ್ಲೆ. ಅದರ ಪೂರ್ವಕ್ಕೆ ಸರ್ವೆ ನಂ. 40/2 ರ ಜಮಿನು, ಪಶ್ಚಿಮಕ್ಕೆ ಭಾವಿಹಾಳ ಗ್ರಾಮಕ್ಕೆ ಹೋಗುವ ರಸ್ತೆ, ಉತ್ತರಕ್ಕೆ ಮಾರಿಹಾಳ ರವರ ಜಮಿನು ಮತ್ತು ದಕ್ಷಿಣಕ್ಕೆ ಸಂಪಗಾಂವ ಸರಹದ್ದಿನ ಜಮಿನುಗಳು ಇರುತ್ತವೆ.

ಸರ್ವೆ ನಂ. 5 ರ ಚಕ್ಕ ಬಂದಿ ಹೇಳಬಲ್ಲೆ. ಅದರ ಪೂರ್ವಕ್ಕೆ ಹಮಗೊಳ ಸುತಗಟ್ಟಿರವರ ಜಮಿನು , ಪಶ್ಚಿಮಕ್ಕೆ ಯಲ್ಲಪ್ಪ ಪೂಜಾರಿರವರ ಜಮಿನು, ಉತ್ತರಕ್ಕೆ ಟೊನ್ನೆ ಮತ್ತು ಉಪ್ಪಾರರವರ ಜಮಿನು ಮತ್ತು ದಕ್ಷಿಣಕ್ಕೆ ಗ್ರಾಮ ಪಂಚಾಯತಿಯ ಎನ್ ಎ ಪ್ಲಾಟ ಇರುತ್ತವೆ.

ಸರ್ವೆ ನಂ. 41 ರ ಚಕ್ಕ ಬಂದಿ ಹೇಳಬಲ್ಲೆ. ಅದರ ಪೂರ್ವಕ್ಕೆ ಸಂಪಗಾಂವ ಸರಹದ್ದಿನ ಜಮಿನುಗಳು , ಪಶ್ಚಿಮಕ್ಕೆ ಭಾವಿಹಾಳ ಗ್ರಾಮಕ್ಕೆ ಹೋಗುವ ರಸ್ತೆ, ಉತ್ತರಕ್ಕೆ ಸರ್ವೆ, ನಂ 40/1 ರ ಜಮಿನು ಮತ್ತು ದಕ್ಷಿಣಕ್ಕೆ ಹಳ್ಳ ಇರುತ್ತದೆ.

O.S. NO.243/2022
PW - 1.
Dated: 18-07-2024.

ಸರ್ವೆ ನಂ. 40/2 ರ ಚಕ್ಕ ಬಂದಿ ಹೇಳಬಲ್ಲೆ. ಅದರ ಪೂರ್ವಕ್ಕೆ ನರಸಿಂಗ ಮತ್ತು ಗೊವಿಂದ ರಜಪೂತರವರ ಜಮಿನು, ಪಶ್ಚಿಮಕ್ಕೆ 40/1 ರ ಜಮಿನು, ಉತ್ತರಕ್ಕೆ ಮಾರಿಹಾಳ ರವರ ಜಮಿನು ಮತ್ತು ದಕ್ಷಿಣಕ್ಕೆ ಸಂಪಗಾಂವ ಸರಹದ್ದಿನ ಜಮಿನುಗಳು ಇರುತ್ತವೆ. ಈ ಮೇಲೆ ಹೇಳಿದ ಚಕ್ಕಬಂದಿಗಳು ಅಜಮಾಸಿನ ಮೇಲೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಜಮಿನುಗಳಲ್ಲಿ ಒಂದು ಜಮಿನು ನಮ್ಮ ಊರು ಪಕ್ಕದಲ್ಲಿ ಇದೆ ಇನ್ನೂಳಿದ ಜಮಿನುಗಳು ನಮ್ಮ ಊರಿನ ಉತ್ತರಕ್ಕೆ ಇರುತ್ತವೆ.

ದಾವಾ ಆಸ್ತಿಗಳ ಉತಾರಗಳು ನನ್ನ 3 ಜನ ಕಾಕಾಗಳಾದ 1 ರಿಂದ 3 ನೇ ಪ್ರತಿವಾದಿಗಳ ಹೆಸರಿನಲ್ಲಿ ಇರುತ್ತವೆ. ಸದರಿ 3 ಜನ ಪ್ರತಿವಾದಿಗಳ ಹೆಸರಿನಲ್ಲಿ ಪ್ರತ್ಯೇಕವಾಗಿ ದಾಖಲಾಗಿರುತ್ತವೆ ಎಂದರೆ ಸರಿಯಲ್ಲ. ಸಾಮೂಹಿಕವಾಗಿ ಇರುತ್ತವೆ.

ಸರ್ವೆ ನಂ. 40/2 6 ನೇ ಪ್ರತಿವಾದಿ ಹೆಸರಿನಲ್ಲಿ ಇರುತ್ತದೆ. ಸದರಿ ಆಸ್ತಿಯನ್ನು 6 ನೇ ಪ್ರತಿವಾದಿ ಹೆಸರಿನಲ್ಲಿ ಒಟ್ಟು ಕುಟಂಬದ ಆದಾಯದಿಂದ ಖರೀದಿ ಮಾಡಿರುವ ಜಮಿನು ಇರುತ್ತದೆ. ಸದರಿ ಜಮಿನು 2011 ರಲ್ಲಿ ಖರೀದಿ ಮಾಡಿರುತ್ತಾರೆ. ಒಟ್ಟು ಕುಟುಂಬದ ಆದಾಯದಿಂದ ಖರೀದಿ ಮಾಡಿರುತ್ತಾರೆ ಎನ್ನುವುದು ಸುಳ್ಳು ಎಂದರೆ

O.S. NO.243/2022
PW - 1.
Dated: 18-07-2024.

ಸರಿಯಲ್ಲ. 6 ನೇ ಪ್ರತಿವಾದಿ ಏನು ಕೆಲಸ ಮಾಡುತ್ತಾರೆ ಎಂದು ನನಗೆ ಗೊತ್ತು. ಅವರು ವಕೀಲರಾಗಿರುತ್ತಾರೆ. 6 ನೇ ಪ್ರತಿವಾದಿ ತಮ್ಮ ವಕೀಲಕಿಯಿಂದ ಬಂದ ಆದಾಯದಿಂದ ದಾವಾ ಆಸ್ತಿಗಳಲ್ಲಿ ಸರ್ವೆ ನಂ. 40/2 ನ್ನು ಖರೀದಿ ಮಾಡಿರುತ್ತಾರೆ ಎಂರದೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅವರು 2011 ರಲ್ಲಿ ವಕೀಲಕಿ ಫ್ರಾರಂಬಿಸಿರಲಿಲ್ಲ ಎಂದು ನುಡಿದಿರುತ್ತಾರೆ. 6 ನೇ ಪ್ರತಿವಾದಿ 2015 ನೇ ಸಾಲಿನಿಂದ ತಮ್ಮ ವಕೀಲಕಿ ವೃತ್ತಿ ಪಾರಂಬಿಸಿರುತ್ತಾರೆ. ಅವರು 2005 ರಲ್ಲಿ ತಮ್ಮ ಎಲ್ ಎಲ್ ಬಿ ಡಿಗ್ರಿ ಪಾಸು ಮಾಡಿದ್ದಾರೆ. ಹೀಗಾಗಿ ಅವರು 2005 ರಿಂದಲೇ ತಮ್ಮ ವಕೀಲಕಿ ವೃತ್ತಿ ಫ್ರಾರಂಬಿಸಿರುತ್ತಾರೆ ಎಂದರೆ ಸರಿಯಲ್ಲ. 6 ನೇ ಪ್ರತಿವಾದಿ ತಾನು ಖರೀದಿ ಮಾಡಿದ ಆಸ್ತಿಯನುನ ಎತ್ತಿ ಹಾಕಬೇಕು ಅಂತಾ ಅವರು 2015 ರಿಂದ ವಕೀಲಕಿ ವೃತ್ತಿ ಫ್ರಾರಂಬಿಸಿದರು ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂ. 40/2 ನ್ನು 6 ನೇ ಪ್ರತಿವಾದಿ ತನ್ನ ಸ್ವಂತ ದುಡಿಮೆಯಿಂದ ಖರೀದಿಸಿರುವ ಆಸ್ತಿ ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಒಟ್ಟು ಕುಟುಂಬದ ಆದಾಯದಿಂದ ಖರೀದಿಸಿರುವ ಆಸ್ತಿ ಎಂದು ನುಡಿದಿರುತ್ತಾರೆ. 6 ನೇ ಪ್ರತಿವಾದಿ ತನ್ನ ವಕೀಲಕಿ ಫ್ರಾರಂಬಿಸಿದ ದಿನದಿಂದ ಕುಟುಂಬದಿಂದ ಪ್ರತ್ಯೇಕ ವಾಸವಿದ್ದು, ಅವಳ ತನ್ನ ಸ್ವಂತ ದುಡಿಮೆಯಂದ ಆಸ್ತಿ ಖರೀದಿಸಿರುತ್ತಾಳೆ ಎಂದರೆ ಸರಿಯಲ್ಲ. 1988 ರಿಂದ ನಾನು ಮತ್ತು ನನ್ನ ತಾಯಿ ಪ್ರತಿವಾದಿಗಳೊಂದಿಗೆ

O.S. NO.243/2022

PW - 1.

Dated: 18-07-2024.

ಯಾವುದೇ ಸಂಪರ್ಕ ಹೊಂದಿರಲಿಲ್ಲ ಎಂದರೆ ಸರಿಯಲ್ಲ. 6 ನೇ ಪ್ರತಿವಾದಿ ಸರ್ವೆ ನಂ. 40/2 ರ ಸಂಪೂರ್ಣ ಮಾಲಿಕಳು ಮತ್ತು ಕಬ್ಜಾದಾರಳು ಇರುತ್ತಾಳೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಮುಂದುವರೆದ ಪಾಟಿ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಿ ಮುಂದುಡಲಾಯಿತು . )

(ಸಾಕ್ಷಿ ವಿಚಾರಣೆಯನ್ನು ನೆರವೇರಿಸಿದ್ದು , ಸಾಕ್ಷಿ ಹೇಳಿದ ಹೇಳಿಕೆಯನ್ನು ಬೆರಳಚ್ಚುಗಾರರಿಗೆ ಉಕ್ತ ಲೇಖನ ನೀಡಿ , ಅದನ್ನು ಗಣಕಿಕೃತಗೊಳಿಸಿದ ಮೇರೆಗೆ ದಾಖಲಿಸಲಾಯಿತು ).

ಓ ಹೇ ಕೇ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು
ಬೈಲಹೊಂಗಲ.